ದಿನಾಂಕಃ 08-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 1 ಪರ ವಕೀಲರಿಂದ,

1) ವಾದಿಗಳು ಈ ದಾವೆಯನ್ನು ಸರ್ವೆ ನಂಬರು ತಪ್ಪಾಗಿದೆ ಎಂದು ಸಲ್ಲಿಸಿರುತ್ತಾರೆ. ವಾದಿಗಳು ಈ ದಾವೆಯನ್ನು ರಾಮೇಗೌಡ ರವರ ವಿರುದ್ಧ ಸಲ್ಲಿಸಿರುತ್ತಾರೆ. ದಾವಾ ಸರ್ವೆ ನಂ. 547/1 ಆಗಿರುತ್ತದೆ. ದಾವಾ ಆಸ್ತಿಯ ಸರಿಯಾದ ಸರ್ವೆ ನಂ.552 ಆಗಿರುತ್ತದೆ. ಸರ್ವೆ ನಂ. 552 ರಲ್ಲಿ 1 ಎಕರೆ 24 ಗುಂಟೆ ಇರುತ್ತದೆ. ಸದರಿ ಆಸ್ತಿಯ ಚೆಕ್ಕು ಬಂದಿಃ

ಪೂರ್ವಕ್ಕೆ - ರಾಮೇಗೌಡ ರವರ ಜಮೀನು
ಪಶ್ಚಿಮಕ್ಕೆ - ರಂಗಶೆಟ್ಟಿರವರ ಜಮೀನು
ಉತ್ತರಕ್ಕೆ - ರಾಮೇಗೌಡ ರವರ ಜಮೀನು
ದಕ್ಷಿಣಕ್ಕೆ - ಪಚ್ಚಮ್ಮ ರತ್ನಮ್ಮ ರವರ ಜಮೀನು ಇರುತ್ತದೆ.

2) ದಾವಾ ಸ್ವತ್ತು ವಾದಿಯರ ಸ್ವಾಧೀನದಲ್ಲಿ ಇರುತ್ತದೆ. ರಂಗಶೆಟ್ಟಿರವರು ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ರಂಗಶೆಟ್ಟಿ ಮತ್ತು ಪಣಿಯಮ್ಮ ರವರು ತಂದೆ ಮತ್ತು ಮಗಳು ಆಗಿರುತ್ತಾರೆ. ಪಣಿಯಮ್ಮ ರವರಿಗೆ ಇಬ್ಬರ ಮಕ್ಕಳು ಇರುತ್ತಾರೆ. ನನ್ನ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಸ್ವತ್ತಿನ ಪಕ್ಕದಲ್ಲಿ ನನಗೆ ಸೇರಿದ ಸರ್ವೆ ನಂ. 554 ಇರುತ್ತದೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಸಹಾಯ ಮಾಡಲು ವಾದಿಗಳ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ